ವಿದ್ಯಾಸಂಸ್ಥೆ ಹಾಗೂ ಹಾಸ್ಟೆಲ್‌ಗಳ ಸಾಲ ಹಾಗೂ ಬಡ್ಡಿಯನ್ನು ಮನ್ನಾ ಮಾಡುವ ಬಗ್ಗೆ

೧೩೨೮. ಶ್ರೀ ಸಿ. ಎಂ. ಉದಾಸಿ (ಹಾನಗಲ್).— ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸಿಂವರೆ ?

ಅ) ಕಳೆದ ಐದು ವರ್ಷಗಳ ಕಾಲದಿಂದ ಇಲ್ಲಿಯವರೆಗೆ ರಾಜ್ಯದಲ್ಲಿ ಖಾಸಗಿ ವಿದ್ಯಾಸಂಸ್ಥೆ ಹಾಗೂ ವಿದ್ಯಾರ್ಥಿನಿಲಯಗಳಂ ಪಡೆದಿರುವ ಸಾಲದ ಮೊತ್ತ ಎಷ್ಟು ? ಹಾಗೂ ಬಡ್ಡಿ ಮತ್ತು ಸುಸ್ತಿ ಬಡ್ಡಿ ಎಷ್ಟು ? (ಜಿಲ್ಲಾವಾರು ತಿಳಿಸುವುದು)

ಆ) ಇಲ್ಲಿಯವರೆಗೂ ಮರುಪಾವತಿಯಾಗಿರುವ ವಿದ್ಯಾರ್ಥಿನಿಲಯಗಳ ಪ್ರತ್ಯೇಕ ಮೊತ್ತ ಎಷ್ಟು ?

ಇ) ಸದ್ರಿ ವಿದ್ಯಾ ಸಂಸ್ಥೆಗಳು ದುಸ್ಥಿತಿಯಲ್ಲಿವೆ ?

ಈ) ಹಾಗಿಲ್ಲದಿದ್ದಲ್ಲಿ ಬಡ್ಡಿ ಹಾಗೂ ಸಾಲವನ್ನು ಮನ್ನಾ ಮಾಡುವುದಕ್ಕೆ ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಸಚಿವರು).—

ಅ) ಈ ಇಲಾಖೆಯಲ್ಲಿ ಖಾಸಗಿ ವಿದ್ಯಾಸಂಸ್ಥೆ ಹಾಗೂ ವಿದ್ಯಾರ್ಥಿನಿಲಯಗಳಿಗೆ ಸಾಲ ನೀಡುವ ಯಾವ ಯೋಜನೆ ಇರುವುದಿಲ್ಲ. ಆದ ಕಾರಣ ಜಿಲ್ಲಾವಾರು ಪಡೆದಿರುವ ಸಾಲದ ಮೊತ್ತ, ಬಡ್ಡಿ ಹಾಗೂ ಸುಸ್ತಿ ಬಡ್ಡಿಯ ಮೊತ್ತದ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಅನ್ವಯವಾಗುವುದಿಲ್ಲ.

ಈ) ಅನ್ವಯವಾಗುವುದಿಲ್ಲ.

ನಿವೃತ್ತ ನೌಕರರಿಗೆ ಸವಲತ್ತುಗಳು

೧೩೫೯. ಶ್ರೀ ಎನ್. ಎಂ. ಅಡ್ಯಂತಾಯ (ಸುರತ್ಕಲ್).— ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನಿವೃತ್ತ ನೌಕರರಿಗೆ ಸವಲತ್ತುಗಳನ್ನು ದೊರಕಿಸಿಕೊಡುವುದಕ್ಕಾಗಿ ಅವರ ವೇತನ ಮತ್ತು ಪರಿಹಾರಗಳ ಪರಿಷ್ಕರಣಕ್ಕಾಗಿ ಆಯೋಗವೊಂದನ್ನು ನೇಮಿಸಿರುವುದು ನಿಜವೇ ?

ಆ) ನಿವೃತ್ತರಿಗೆ ಕೂಡ ವೃತ್ತಿಯಲ್ಲಿರುವ ನೌಕರರಿಗೆ ದೊರೆಯುವ ತುಟ್ಟಿಭತ್ಯ ಮತ್ತಿತರ ಪರಿಹಾರಗಳು ಕಾಲಕಾಲಕ್ಕೆ ದೊರೆಯುವಂತೆ ರಾಜ್ಯ ಸರ್ಕಾರದವರಂ ಕೈಗೊಂಡ ಕ್ರಮಗಳೇನು ?

ಶ್ರೀ ರಾಮಕೃಷ್ಣ ಹೆಗ್ಗಡೆ (ಮುಖ್ಯ ಮಂತ್ರಿಗಳು).—

ಅ) ಸರ್ಕಾರವು ನೇಮಿಸಿರುವ ಮೂರನೇ ವೇತನ ಆಯೋಗವು ಈ ವಿಚಾರವನ್ನು ಪರಿಶೀಲಿಸುವುದು.

ಆ) ವೃತ್ತಿಯಲ್ಲಿರುವ ನೌಕರರಿಗೆ ತುಟ್ಟಿಭತ್ಯ ಮಂಜೂರಾದ ದಿನದಿಂದಲೇ ನಿವೃತ್ತರಿಗೂ ಪಿಂಚಣಿ ವೇಳೆಯ ತುಟ್ಟಿಭತ್ಯವನ್ನು ಮಂಜೂರು ಮಾಡುವುದು ಸರ್ಕಾರದ ನೀತಿ. ಈ ನೀತಿಯಂತೆ ವೃತ್ತಿಯಲ್ಲಿರುವ ಸರ್ಕಾರಿ ನೌಕರರಿಗೆ ತುಟ್ಟಿಭತ್ಯ ಮಂಜೂರಾದ ದಿನದಿಂದಲೇ ಪೆನ್‌ಷನ್‌ದಾರರಿಗೂ ತುಟ್ಟಿಭತ್ಯ ದೊರಕುವಂತೆ ಸರ್ಕಾರ ಕಾಲಕಾಲಕ್ಕೆ ಆದೇಶ ಹೊರಡಿಸುತ್ತದೆ.